# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1045
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 20/08/2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರಕಾರಿ ಭೂಮಿಯ ರಕ್ಷಣೆ ಮತ್ತು ನಿರ್ವಹಣೆ ಜವಾಬ್ದಾರಿ ಯಾವ ಇಲಾಖೆಯದ್ದು; ಕಂದಾಯ ಹೊರತುಪಡಿಸಿ ಇತರ ಇಲಾಖೆಗಳಿಗೆ ಈ ಕುರಿತು ಅವಕಾಶವಿದೆಯೇ; | ಸರ್ಕಾರಿ ಭೂಮಿಯ ರಕ್ಷಣೆ ಮತ್ತು ನಿರ್ವಹಣೆಯ ಜವಬ್ಬಾರಿಯು ಕಂದಾಯ ಇಲಾಖೆದಾಗಿರುತ್ತದೆ.<br><br>ಕಂದಾಯ ಇಲಾಖೆಯಿಂದ ಇತರೆ ಇಲಾಖೆಗೆ ಮಂಜೂರಾದ ಪಕ್ಷದಲ್ಲಿ ಸದರಿ ಜಮೀನಿನ ರಕ್ಷಣೆ ಮತ್ತು ನಿರ್ವಹಣೆಯ ಜವಬ್ಬಾರಿಯು ಮಂಜೂರಾತಿ ಇಲಾಖೆಗೆ ಒಳಪಟ್ಟಿರುತ್ತದೆ |
| ಆ) | ಇಲ್ಲಿಯವರೆಗೆ ಎಷ್ಟು ಪ್ರಮಾಣದ ಸರಕಾರಿ ಭೂಮಿಯಲ್ಲಿನ ಒತ್ತುವರಿ, ಅತಿಕ್ರಮಣಗಳನ್ನು ತೆರವುಗೊಳಿಸಿ ಕಂದಾಯ ಇಲಾಖೆಯ ಸುಪರ್ದಿಗೆ ತೆಗೆದುಕೊಳ್ಳಲಾಗಿದೆಯೇ; | ಜಿಲ್ಲಾವಾರು ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಇ) | ಸರಕಾರಿ ಭೂಮಿಯಲ್ಲಿನ ಕಾನೂನು ಬಾಹಿರ ಅತಿಕ್ರಮಣಗಳನ್ನು ತೆರವುಗೊಳಿಸುವ, ಸಾರ್ವಜನಿಕ ರಸ್ತೆ, ದಾರಿ, ಪರಂಬೋಕು ತೋಡು ಹಾಗೂ ಇತರ ತೆರೆದ ಪ್ರದೇಶಗಳನ್ನು ಮುಕ್ತವಾಗಿರಿಸುವುದನ್ನು ಕಂದಾಯ ಇಲಾಖೆ ಹೇಗೆ ಖಾತರಿಪಡಿಸುತ್ತಿದೆ; (ವಿವರ ನೀಡುವುದು) | ಸರ್ಕಾರಿ ಜಮೀನಿನ ಅತಿಕ್ರಮಣವಾಗುವುದನ್ನು ತಡೆಗಟ್ಟಲು ತಂತಿ ಬೇಲಿ ಅಳವಡಿಸುವುದು. ಸರ್ಕಾರಿ ಜಮೀನು ಎಂದು ನಾಮಫಲಕ ಅಳವಡಿಸುವ ಮೂಲಕ ಸದರಿ ಜಮೀನುಗಳು ಪುನಃ ಅತಿಕ್ರಮಣವಾಗದಂತೆ ಕ್ರಮ ಜರುಗಿಸಲಾಗುತ್ತದೆ ಹಾಗೂ ಸರ್ಕಾರವು LAND BEAT APP ನ್ನು ಜಾರಿಗೆ ತಂದಿದ್ದು ಆಪ್ ಮೂಲಕ ಸ್ಥಳೀಯ ಗ್ರಾಮಾಡಳಿತ ಅಧಿಕಾರಿಗಳು (VAO) ಸರ್ಕಾರಿ ಜಮೀನಿಗೆ ಬೇಟಿ ನೀಡಿ ಒತ್ತುವರಿ ವಿಸ್ತೀರ್ಣವನ್ನು ಸದರಿ APP ನಲ್ಲಿ ದಾಖಲಿಸಲು ಕ್ರಮವಹಿಸಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಸುಮಾರು 14 ಲಕ್ಷ ಸರಕಾರಿ ಭೂಮಿಯಲ್ಲಿ ಒತ್ತುವರಿ ಸಕ್ರಮಕ್ಕಾಗಿ ಅರ್ಜಿಗಳು ಸಲ್ಲಿಕೆಯಾಗಿದ್ದು ವಿವಿಧ ಹಂತಗಳಲ್ಲಿ ವಿಲೇವಾರಿಗೆ ಬಾಕಿಯಿರುವ ಕಾರಣ ಸರಕಾರಿ ಸಂಸ್ಥೆಗಳಿಗೆ ಸಾರ್ವಜನಿಕ ಉದ್ದೇಶಗಳಿಗೆ ಭೂಮಿ ಲಭಿಸದಿರುವುದು ನಿಜವೇ; ಈ ಕುರಿತು ಇಲಾಖೆ ಕೈಗೊಂಡ ಕ್ರಮಗಳೇನು; | ನಮೂನೆ 50 , 53 ಮತ್ತು 57 ರ ಅರ್ಜಿಗಳನ್ನು ಜರೂರಾಗಿ ವಿಲೇವಾರಿ ಮಾಡುವ ಸಲುವಾಗಿ ಬಗರ್ ಹುಕುಂ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಾಂಶದಲ್ಲಿ ಎಲ್ಲಾ ಬಾಕಿ ಇರುವ ಅರ್ಜಿಗಳನ್ನು ನಮೂದಿಸಿ ವಿಲೇವಾರಿ ಮಾಡಲು ಕ್ರಮವಹಿಸಲಾಗಿರುತ್ತಾದೆ ಹಾಗೂ ಮಂಜೂರಾತಿಗೆ ಅನರ್ಹವಾಗಿರುವ ಅರ್ಜಿಗಳನ್ನು ವಜಾ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿರುತ್ತದೆ. ಸದರಿ ಅರ್ಜಿಗಳನ್ನು ವಜಾ ಮಾಡಿದ ನಂತರ ತಹಶೀಲ್ದಾರ್ ರವರಿಂದ ಒತ್ತುವರಿ ಮಾಡಿರುವ ಜಮೀನನ್ನು ತೆರವುಮಾಡಲು ನಿಯಮಾನುಸರ ಕ್ರಮವಹಿಸಲಾಗುತ್ತದೆ. |

| | | |
|---|---|---|
| ಉ) | ಕಂದಾಯ ಮತ್ತು ಸರಕಾರಿ ಭೂಮಿಯಲ್ಲಿರುವ ನಿಯಮಬಾಹಿರ ಕಟ್ಟಡ ಹಾಗೂ ಇತರ ನಿರ್ಮಾಣಗಳನ್ನು ಮತ್ತು ಭೂಮಿ ಮಂಜೂರಾಗಿರುವ ಉದ್ದೇಶಕ್ಕೆ ಬಳಸದಿರುವ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಜರುಗಿಸುವ/ತೆರವುಗೊಳಿಸಲು ಅವಕಾಶ ಕಂದಾಯ ಹೊರತುಪಡಿಸಿ ಇತರ ಇಲಾಖೆಗಳಿಗಿದೆಯೇ; ಇಲ್ಲದಿದ್ದಲ್ಲಿ ಇತರ ಸ್ಥಳೀಯ ಸಂಸ್ಥೆಗಳಿಗೆ ತೆರವುಗೊಳಿಸಲು ಸೂಚಿಸಿರುವ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯವೇನು? | ಸರ್ಕಾರಿ ಭೂಮಿಯಲ್ಲಿನ ಅತಿಕ್ರಮಣವನ್ನು ತೆರವುಗೊಳಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಪ್ರಕರ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರವರಿಗೆ ಅಧಿಕಾರ ಇರುತ್ತದೆ ಹಾಗೂ ಕರ್ನಾಟಕ ಪಂಚಾಯತ ರಾಜ್ (ಒತ್ತುವರಿಗಳನ್ನು ತೆರವುಗೊಳಿಸುವ) ನಿಯಮಗಳು 2011ರನ್ವಯ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಕ ಅಧಿಕಾರಿರವರಿಗೆ ಕಲುವೆಗಳು ಕೆರೆಗಳು, ಆಟದ ಮೈದಾನ ಸರ್ವಾಜನಿಕ ಉದ್ಯಾನವನಗಳು, ರುದ್ರಭೂಮಿಗಳನ್ನು ತೆರವುಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 145 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಅನುಬಂಧ-1

| ಕ್ರ.ಸಂ | ಜಿಲ್ಲೆ | ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ | |
|---|---|---|---|
| | | ಎಕರೆ | ಗುಂಟೆ |
| 1. | ಬೆಂಗಳೂರು ನಗರ | 14952 | 2 |
| 2. | ಬೆಂಗಳೂರು ಗ್ರಾಮಾಂತರ | 8603 | 0 |
| 3. | ಚಿಕ್ಕಬಳ್ಳಾಪುರ | 8608 | 32 |
| 4. | ಚಿತ್ರದುರ್ಗ | 9728 | 27 |
| 5. | ದಾವಣಗೆರೆ | 12426 | 1 |
| 6. | ಕೋಲಾರ | 14952 | 2 |
| 7 | ರಾಮನಗರ | 2864 | 38 |
| 8 | ಶಿವಮೊಗ್ಗ | 3975 | 21 |
| 9 | ತುಮಕೂರು | 7584 | 35 |
| 10 | ಚಾಮರಾಜನಗರ | 5933 | 7 |
| 11 | ಚಿಕ್ಕಮಗಳೂರು | 8011 | 9 |
| 12 | ದಕ್ಷಿಣ ಕನ್ನಡ | 1968 | 33 |
| 13 | ಹಾಸನ | 3323 | 13 |
| 14 | ಕೊಡಗು | 4051 | 24 |
| 15 | ಮಂಡ್ಯ | 5226 | 21 |
| 16 | ಮೈಸೂರು | 13440 | 37 |
| 17 | ಉಡುಪಿ | 1802 | 25 |
| 18 | ಬೆಳಗಾವಿ | 4399 | 5 |
| 19 | ಬಿಜಾಪುರ /ವಿಜಯಪುರ | 1729 | 37 |
| 20 | ಬಾಗಲಕೋಟೆ | 1243 | 18 |
| 21 | ಧಾರವಾಡ | 852 | 21 |
| 22 | ಗದಗ | 1388 | 0 |
| 23 | ಹಾವೇರಿ | 62634 | 32 |
| 24 | ಉತ್ತರ ಕನ್ನಡ ಜಿಲ್ಲೆ | 763 | 23 |
| 25 | ಕಲಬುರಗಿ | 1982 | 2 |
| 26 | ಬಳ್ಳಾರಿ | 45310 | 8 |
| 27 | ಬೀದರ್ | 1230 | 8 |
| 28 | ವಿಜಯನಗರ | 14509 | 25 |
| 29 | ಕೊಪ್ಪಳ | 3094 | 23 |
| 30 | ರಾಯಚೂರು | 9756 | 25 |
| 31 | ಯಾದಗಿರಿ | 36 | 35 |
| | **ಒಟ್ಟು** | **276385** | **29** |